Reg No. M 1299 (Founded 1917) Daily & Weekly

ಸತ್ಯವಾದಿ
SATYAVADI

(ಅರಮನೆ ಸಿರಸ್ತೇದಾರ್ ಎಂ. ವಿ. ಸುಬ್ಬರಾಯರಿಂದ ಸ್ಥಾಪಿಸಲ್ಪಟ್ಟಿದ್ದು)

ಸಂಪುಟ 28 ಸಂಚಿಕೆ 175] ಬುಧವಾರ 4—4—45 [3 ಪೈ

ಸಂಸ್ಥಾನದ ಸುದ್ದಿಗಳು

ತುಮಕೂರು ಬಳಿಯಿರುವ ಬಿಲ್ಲಾರದಲ್ಲಿ ಭೂಗಾರವು ಸಿಕ್ಕುವುದೆಂದು ಮೈಸೂರು ಸರ್ಕಾರದವರು ಪತ್ತೆ ಹಚ್ಚಿರುತ್ತಾರೆ.

ಂ ಂ

ಹಾಸನದಲ್ಲಿ ಪ್ಲೇಗ್ ರೋಗ ಪ್ರಾರಂಭವಾಗಿದೆ.

ಂ ಂ

ಇದೇ ಜೂನಿನಿಂದ ರಾಜಧಾನಿಯು ಮಹಾರಾಣಿಯವರ ಕಾಲೇಜನ್ನು ರಾಜಕುಮಾರಿ ಚಲುವಾಂಬಾ ಭವನದಲ್ಲಿ ನಡೆಸುವರೆಂದು ತಿಳಿಯಲಾಗಿದೆ.

ಂ ಂ

ಮದರಾಸಿನ ಡಾ || ಸಿ. ದ್ವಾರಕನಾಥರವರನ್ನು ಆಯುರ್ವೇದ ಮತ್ತು ಯುನಾನಿ ಆಸ್ಪತ್ರೆಯ ರಿಸರ್ಚಸ್ ಆಫೀಸರ್ ಮತ್ತು ಫಾರ್ಮಕಾಲಜಿಸ್ಟರಾಗಿ 300 ರೂ. ಸಂಬಳದಲ್ಲಿ ನೇಮಿಸಿಕೊಳ್ಳುತ್ತಾರೆ.

ಂ ಂ

ಮುಂಬಯಿನಲ್ಲಿ ಶ್ರೀ ಪಿ ಹೆಚ್. ಕೃಷ್ಣರಾಯರು ಹೊಸಗಿರುವ ಮೈಸೂರಿನರ ಬಗ್ಗೆ ಕೈಪಿಡಿ ತಯಾರಿಸುತ್ತಿರುವರು.

ಂ ಂ

ಚಾಮರಾಜನಗರದ ದೊಂಬಿ ಮೊಖದ್ದಮೆ ಅಪೀಲು ಹೈ ಕೋರ್ಟು ಫುಲ್ ಬೆಂಚಿನ ಮುಂದೆ ಮುಂದಿನ ವಾರ ಬರಬಹುದೆಂದು ಹೇಳಲಾಗಿದೆ.



ಐ.ಜೆ. ಹಾಲ್, ಸರಾಫ್ ಅಂಗಡಿ
ರವೇ ಬೀದಿ, ಮೈಸೂರು.

ಜರ್ಮನಿ ಶರಣಾಗತವಾಗುವುದೇ

ಮ್ಯಾಡ್ರಿಡ್. ಏ 3 — ಇಲ್ಲಿಗೆ ಬಂದಿರುವ ಹೆಚ್ಚಿನ ಅಧಿಕೃತ ವಾರ್ತೆಯಂತೆ, ಜರ್ಮನಿಯ ಪ್ರಮುಖ ಮಿಲಿಟರಿ ಅಧಿಕಾರಿಗಳು ಜರ್ಮನಿಯು ಶರಣಾಗತವಾಗಲೇ ಬೇಕೆಂದೂ, ಪೂರ್ವದಲ್ಲಿನ ನಾಜೀ ಮಿಲಿಟರಿ ಸೇನಾನಿಗಳು ವೆಟಿಕಾರ್ ಮೂಲಕ ಜನರಲ್ ಐಸೆನ್‌ಹೋವರ್‌ರೊಡನೆ ಶರಣಾಗತದ ಬಗ್ಗೆ ಒಂದು ಒಪ್ಪಂದವನ್ನು ಮಾಡಲು ಸಮಾಲೋಚಿಸುತ್ತಿರುವರೆಂದೂ, ಹೇಳಲಾಗಿದೆ

ಹಿಟ್ಲರು ರಿಬ್ಬೆಂಟ್ರಾಪ್ ಮೂಲಕ ತನ್ನ ಕಡೆಯ ಶಾಂತಿ ಶರತ್ತುಗಳನ್ನು ಬ್ರಿಟನ್ನಿಗೆ ತಿಳಿಸಲು ಹೇಳಿರುವುದಾಗಿ ಹೇಳಿರುವನಂತೆ. ತನ್ನ ಸರ್ವಾಧಿಕಾರತ್ವವನ್ನು ಬಿಡುವನಂತೆ. ರಷ್ಯನರ ಮೇಲೆ ಮಾತ್ರ ಯುದ್ಧ ನಡೆಸುವುದಾಗಿಯೂ ಬ್ರಿಟ್, ಅಮೇರಿಕಾಗಳ ಮೇಲೆ ಯುದ್ಧ ನಿಲ್ಲಿಸುವುದಾಗಿಯೂ ತಿಳಿಸಿರುವನಂತೆ

ಮದರಾಸು ಏ 3— ಲಕ್ಷ್ಮೀಕಾಂತಂ ಖೂನಿಯು ಸೆಷನ್ಸ್ ವಿಚಾರಣೆಯಲ್ಲಿ ನಿನ್ನೇ ಉಪಹಾರಾನಂತರ ಮಿ || ನಾರ್ಗಣಂರವರ ಪಾಟೀಸವಾಲನ್ನು ಶ್ರೀ ಮುನ್ಸಿಯವರು ನಡೆಸಿದ್ದು ಇವತ್ತೂ ಮುಂದುವರಿಸಿದರು. ಶ್ರೀ ಗೋಪಾಲಸ್ವಾಮಿ ಚೆಟ್ಟಿಯರ ವಿಚಾರಣೆ ಮತ್ತು ಪಾಟೀಸವಾಲೂ ನಡೆದು, ರಿಕ್ಷಾಗಾಡಿಯ ಗೋಪಾಲನ ಸಾಕ್ಷಿ ನಡೆದು ಮಿ | ಮುನ್ಸಿಯವರಿಂದ ಪಾಟೀಸವಾಲು ನಡೆಯಿತು.

ಬೊಂಬಾಯಿ ಏ 3— ಅಸ್ಸಾಂ ಚಿಮ್ಮೂರು ದಿನಾಚರಣೆ ನಡೆದು, ಮಾರ್ಕೆಟ್, ಮಿಲ್ಲುಗಳು, ಸ್ಕೂಲುಗಳು ಎಲ್ಲಾ ಮುಚ್ಚಲ್ಪಟ್ಟಿದ್ದವು. ಮರಣದಂಡನೆ ತಪ್ಪಲೆಂದು ಎಲ್ಲರ ಕೋರಿಕೆ.

ಲಂಡನ್ ಮೇಲೆ 4 ದಿನಗಳಿಂದ ಶತ್ರು ಫ್ಲೈಯಿಂಗ್ ಬಾಂಬುಗಳ ಹಾವಳಿ ಇಲ್ಲವೆಂದು ವರದಿಯಾಗಿದೆ.

ಇದೇ ರೀತಿ ಯುದ್ಧವು ಮುಂದುವರಿಯುತ್ತಿದ್ದರೆ, ಅಮೇರಿಕಾದಲ್ಲಿ ಮುಂದಿನ ಫಳಿಗಾಲಕ್ಕೆ 10 ಮಿಲಿಯು ಟನ್ ಕಲ್ಲಿಜ್ಜಲು ಖೋತವಾಗುವುದು. ಇದಕ್ಕಾಗಿ ಮನೆ ಕಲಸಗಳಿಗೆ ಶೇಕಡಾ 20 ರಷ್ಟು ಖೋತಾ ಮಾಡುವರು.

ಹಿಟ್ಲರು ಜರ್ಮನಿಯಲ್ಲಿರುವ ಒಂದು ಕಾಲಿನವರನ್ನೂ ಬಿಟ್ಟಿಲ್ಲ. ಇವರನ್ನು ಟ್ಯಾಂಕುಗಳಲ್ಲಿ ಕೂರಿಸಿ ಟ್ಯಾಂಕ್ ನಡೆಸುವ ಕೆಲಸ ತೆಗೆದುಕೊಳ್ಳುತ್ತಿದ್ದಾನೆ. ಈಗ ಕೈಸೆರೆಯಾಗಿರುವ ಒಂಟಿ ಕಾಲಿನವರಿಂದ ಈ ವಿಷಯ ಹೊರಪಟ್ಟಿತು.

ರಷ್ಯನ್ನರು ಸ್ಯಾನ್‌ಫ್ರಾನ್ಸಿಸ್ಕೋ ಸಮ್ಮೇಳನದಲ್ಲಿ ಭಾಗವಹಿಸಲಾರರೆಂದು ವರ್ತಮಾನವಿದೆ. ಈ ಸಮ್ಮೇಳನಕ್ಕೆ ಮುಂಜೆ ತ್ರಿಮೂರ್ತಿಗಳು ಸಮ್ಮಿಳಿತರಾಗುವರೆಂದು ಹೇಳಲಾಗಿದೆ.

ರೂರ್ ಕೃತಕ ಪಟ್ಟಣ

ರೂರ್ ಕಣಿವೆಯಲ್ಲಿ ಮಿತ್ರ ವೈಮಾನಿಕರನ್ನು ವಂಚಿಸಲು ಜರ್ಮನರು ವಾಸ್ತವಿಕವಲ್ಲದ ಪಟ್ಟಣಗಳನ್ನು ಅಲ್ಲಲ್ಲೆ ಕಟ್ಟಿದ್ದರು. ಈ ಕೆಲಸವನ್ನು 1942 ರಿಂದ ಪ್ರಾರಂಭಿಸಿ, ಈ ವಿಲಕ್ಷಣ ವಕ್ರ ಕಟ್ಟಡಗಳ ಬೆಳಕು ಮೇಲಿಂದ ಭೂಮಿಯ ಮೇಲೆ ಬೀಳುವಂತೆ ಮಾಡಿ, ರಾತ್ರಿ ಕಾಲದಲ್ಲಿ ಇದೊಂದು ಪಟ್ಟಣ ಇಲ್ಲವೆ ಕಾರ್ಖಾನೆಗಳ ಸಾಲೆಂದು ತಿಳಿಯುವ ಹಾಗೆ ರಚಿಸಿದ್ದರು. ಮನೆಗಳ ಮೇಲೆ ಹತ್ತು ಅಡಿ ಉದ್ದದ ಮರದಿಂದ ಮಾಡಿದ ಚಿಮ್ಮಗಳು ಸಾಲು ಸಾಲಾಗಿದ್ದವು- ಇವುಗಳಿಂದ ಹೊಗೆಯನ್ನು ಹೊರಡಿಸುತ್ತಿದ್ದರು. ಭೂಮಿಯು ಮೇಲೆ ಬೆಳಕಿರುತ್ತಿದ್ದಿತು. ಬ್ರಿಟಿಷ್ ವೈಮಾನಿಕರು ಈ ಜಪಾನರ ಮೋಸಕ್ಕೆ ಒಳಗಾಗುವರೇ ? ನೂರಾರು ಸರ್ಚ್ ಲೈಟ್‌ಗಳ ಸಹಾಯದಿಂದ ಈ ಕೃತ್ರಿಮ ವೈಶಾಚ ಪಟ್ಟಣಗಳನ್ನು ಪತ್ತೆ ಮಾಡುತ್ತಾ ನಿಜವಾದ ರೂರ್ ಪ್ರಾಂತ್ಯದ ಪಟ್ಟಣಗಳನ್ನು ನಾಶಮಾಡಿದರು.

ಯುದ್ಧ ವಾರ್ತೆ

ಅಮೆರಿಕಾ ಸೇನೆ ಬರ್ಲಿನ್ನಿಗೆ 150 ಮೈಲಿ ಹತ್ತಿರ ಬಂದಿದೆ.

ಂ ಂ

ಕೈಗಾರಿಕಾ ನಗರ ವೀಸರ್‌ನೆಸ್‌ಹಾಟ್ ರಷ್ಯನರ ವಶವಾಯಿತು. ಹಂಗೇರಿಯ ಬಾಲಟನ್ ಎಣ್ಣೆ ಕೇಂದ್ರ ರಷ್ಯನರ ವಶವಾಯಿತು.

ಂ ಂ

ಒಕಿನಾವಾದಲ್ಲಿ ಮಿತ್ರ ಸೇನೆ ಮುಂಡೆ ನುಗ್ಗಿ ಜಪಾನಿ ಸೇನೆಯನ್ನು ಇಬ್ಭಾಗ ಮಾಡಿದೆ.

ಂ ಂ

ಬ್ರಿಟಿಷರು ಸುಮಾತ್ರದಲ್ಲಿ ನೌಕಾಧಾಳಿ ಮಾಡಿ, ಅಂಡಮನ್ನಾ ಬಳಿ ಆರು ಜಪಾನ್ ನೌಕೆಗಳನ್ನು ನೀರುಪಾಲು ಮಾಡಿದರು.

ಚಿನ್ನಾ ಬೆಳ್ಳಿ ಧಾರಣೆ

ಸವರ್ಣ 1 ಕ್ಕೆ	ರೂ. 50-6-0
ಚಿನ್ನ ತೊಲ 1 ಕ್ಕೆ	73-0-0
ಬೆಳ್ಳಿ "	1-5-6

ವಿವಿಧ ವಿಷಯ

ರೊಮೇನಿಯಾದ ವೆಶದಲ್ಲಿದ್ದ 26 ಸಾವಿರ ಟರ್ಕ ಮೆಷನರಿ ಸಾಮಾನ್ಯ ರಷ್ಯಕ್ಕೆ ಸಾಗಿದೆ.

ಜರ್ಮನಿಯಲ್ಲಿ ಇನ್ನು ಯುದ್ಧಕ್ಕೆ ತಯಾರಿರುವವರು 20 ಮಿಲಿಯಕ್ ಜನರು ಮಾತ್ರವೆಂದು ಗೊತ್ತಾಗಿದೆ.

ಜಪಾನ್ ನೌಕೆಗಳಲ್ಲಿ ಅನೇಕವು ಈ ಚಿಗೆ ತಲೆ ತೋರಿಸುತ್ತಿಲ್ಲ. ನೌಕಾ ಕದನಕ್ಕೆ ಅಣಿಮಾಡಿಕೊಳ್ಳುತ್ತಿದೆ.

ಸ್ವರಾಜ್ಯ ಬಾವುಟವನ್ನು ಹಾರಿಸಿದ್ದರಿಂದ ಅನೇಕರಿಗೆ ಬೆಜವಾಡದಲ್ಲಿ 6 ತಿಂಗಳು ಕಠಿಣ ಸಜವಾಯಿತು.

ಜರ್ಮನಿಯವರು ಕುಟಿಕ ಬೀವಕ್ಕೆ ಬಂದಿದ್ದರೂ ಹೊಸ ತರಹ, ದೊಡ್ಡದಾದ 'ಗೋಲಿಯಾರ್' ಎಂಬ ನೂತನ ಟ್ಯಾಂಕನ್ನು ತಯಾರಿಸಿ ರಣರಂಗದಲ್ಲಿ ಬಿಟ್ಟಿರುವರು.

ಭಾರತೀಯ ಸ್ವಯಂ ಡಾಳ್ವರುಗಳು ಈಗ ಇಟಲಿ ರಂಗದಲ್ಲಿ ಕೆಲಸ ಮಾಡುತ್ತಿರುವರು.

ಚರ್ಚಿಲರ ಪತ್ನಿಯವರು ಮಾಸ್ಕೊವನ್ನು ತಲ್ಪಿದರು.

ಇದುವರೆಗೆ ಮಿಲಿಟರಿಯವರಿಗಾಗಿ ಭಾರತದಲ್ಲಿ 859220 ದನಗಳನ್ನೂ, 20 ಲಕ್ಷ ರೂ. ಬೆಲೆ ಬಾಳುವ ಕುರಿಗಳನ್ನೂ ಕೊಲೆ ಮಾಡಿರುವುದಾಗಿ ಸರ್ಕಾರಿಯಾಗಿ ಹೇಳಲಾಗಿದೆ.

ಸಂ' ಫ್ರಾನ್ಸಿಸ್' ಮೈಲಿಯವರು ಸಂಯುಕ್ತ ಸ್ವಾಂತ್ರದ ಹೊಸ ಗೌರ್ನರ್‌ರಾಗಿ ನೇಮಕರಾದರು.

ಲೀಗಿನ ಡಾಕ್ ಪತ್ರಿಕೆಯು ಮಿ. ಫೋ ತಾಕ್ ಜೋನಫ್‌ರವರು ಭಾರತಸರ್ಕಾರದ ಇಕ್ಫರ್ಮೇಷನ್ ಆಫೀಸರಾಗಿ ನೇಮಕರಾದರು.

ಆಸ್ಟ್ರೇಲಿಯಾಕ್ಕೆ ಹೆಚ್ಚು ಜನ ಬೇಕಾದ್ದರಿಂದ ಬ್ರಿಟನ್ನು ಮತ್ತು ಯುರೋಪಗಳಿಂದ ವಲಸೆ ಏರ್ಪಾಡಾಗುತ್ತಿದೆ ಬ್ರಿಟನ್ನಿನಿಂದ 50 ಸಾವಿರ ಪಕ್ಕಗಳನ್ನು ಕರೆತರುವ ಯೋಚನೆ ಸಹ ಮಾಡಲಾಗಿದೆ.

ಪಂಜಾಬ್ ವಿಶ್ವವಿದ್ಯಾನಿಲಯದ ಕಾಲೇಜುಗಳಲ್ಲಿ ಯೋಗಾಸನಾಧನೆ ಮಾಡಲು ಸರ್ಕಾರದವರು ಅನುಮತಿ ಕೊಟ್ಟಿದ್ದಾರೆ.

ರಕ್ತವೃದ್ಧಿಗೆ — ಧಾತುಪುಷ್ಟಿಗೆ

ಶಕ್ತಿಸುಧಾ

ಕಿಕ್ಕಿರಿದ ಜನಸಂದಣಿಯಿಂದ ತುಂಬಿದ ಅಮೋಘ 4 ನೇ ವಾರ

At Ranjit Pagli Duniya

ರಣಜಿತ್ ಟಾಕೀಸಿನಲ್ಲಿ

ಪಗಲಿದುನಿಯಾ

(ಹಿಂದಿ)

ನುಮ್ತಾಜ್ ಶಾಂತಿ ನೋತಿಲಾಲ್ ಷೇಕ್‌ಮುಕ್ತಾರ್

ಪಾತ್ರವಹಿಸಿರುವರು

AT OPERA — DOST

ಆಪೆರಾ ಟಾಕೀಸ್ 3 ನೇ ವಾರ

ನೋತೀಲಾಲ್, ನೂರ್‌ಜಹಾನ್ ಪಾತ್ರವಹಿಸಿರುವ

ದೋಸ್ತ್ (ಹಿಂದಿ)

From 7-4-45

Air Raid Wardens

With Stan Laurel & Oliver Hardy

For Good Printing—

L. N. Press

Srirampet MYSORE

TALK-A-TONE

(The Pioneer Film-mag of S. India)

From 1-3-45 Re. 1 per copy.

Local Agent—D. Mahadev

Opera Talkies, Mysore

ಆಂದವಾದ ಹೊಲಿಗೆಗೆ

— ನಮ್ಮಲ್ಲಿ ಬನ್ನಿ —

ಶ್ರೀ ಮಹಾಲಕ್ಷ್ಮಿ ಹಾಲ್

ಸಯ್ಯಾಜಿರಾವ್ ರಸ್ತೆ ಮೈಸೂರು

Good Coffee

Sastry's Coffee Rooms

Chamarajapuram, Mysore

Edited, Printed and published by M. S. Krishna Rao, at the Satvavadi Press, Chamaraja Agrahar, Mysore

ಆರ್ಡಿನ್ಸ್ ಹತ್ತಿರ ಲ್ಯಾಯಿಂ ದಕ್ಷಿಣದಲ್ಲಿ ಶತ್ರುಗಳಿಗೆ ಶರಣಾತವಾಗಲು ಒಂದು ಸಾಲು ಸೈನಿಕರು